ತಂತ್ರವಾಗಿದೆ ಎಂದೂ ಹೇಳಲಾಗುತ್ತಿದೆ. ರಷ್ಯನ್ ಪಡೆಯು ಸ್ಥಾವರದ ರಚನೆಯನ್ನು ರಕ್ಷಿಸುತ್ತಿದ್ದು, ಪ್ರತಿದಾಳಿಗೆ ಇದೇ ಪ್ರಚೋದನೆಯಾಗಬಾರದು ಹಾಗೆಯೇ ನ್ಯಾಟೊ ರಾಷ್ಟ್ರಗಳಿಗೆ ಇದು ಎಚ್ಚರಿಕೆಯ ಗಂಟೆ ಎನ್ನಲಾಗುತ್ತಿದೆ.

ಪರಮಾಣು ವಿದ್ಯುತ್ ಸ್ಥಾವರವು ದೈತ್ಯ ರಚನೆಯಾಗಿದ್ದು ಇಂಧನ ಸರಳುಗಳನ್ನು ಒಳಗೊಂಡಿರುತ್ತದೆ. ವಿಕಿರಣಶೀಲ ಧಾತುಗಳಾದ ಯುರೇನಿಯಂ ಅಥವಾ ಪೊಲೊನಿಯಂ ಅನ್ನು ಗುಳಿಗೆಗಳನ್ನಾಗಿಸಿ ಸರಳುಗಳಲ್ಲಿ ತುಂಬಿಸಿರುತ್ತಾರೆ. ಈ ಇಂಧನವು ಅಪಾಯಕಾರಿ ವಿಕಿರಣಗಳನ್ನು ಹೊಮ್ಮಿಸುತ್ತದೆ. ಧಾತುವಿನ ಪರಮಾಣು ವಿದಳನ ಕ್ರಿಯೆಯಿಂದ (ನ್ಯೂಟ್ರಾನ್ ಕಣವು ಯುರೇನಿಯಂ ಪರಮಾಣುವನ್ನು ರಾಸಾಯನಿಕವಾಗಿ ವಿಭಜಿಸುವ ಕ್ರಿಯೆ) ಬೃಹತ್ ಪ್ರಮಾಣದ ಶಾಖ ಬಿಡುಗಡೆಯಾಗುತ್ತದೆ. ತಂಪುಕಾರಕವಾಗಿ ಬಳಸುವ ನೀರು ಹಬೆಯಾಗಿ ಪರಿವರ್ತನೆಗೊಳ್ಳುತ್ತದೆ. ಹಬೆಯಿಂದ ಟರ್ಬೈನ್‌ಗಳನ್ನು ತಿರುಗಿಸಿ ವಿದ್ಯುತ್ ಉತ್ಪಾದಿಸಲಾಗುತ್ತದೆ. ಪರಮಾಣು ವಿದಳನವು ಅನಿಯಂತ್ರಿತವಾಗಿದ್ದು, ಆ ಕ್ರಿಯೆಯನ್ನು ನಿಯಂತ್ರಿಸಲು ಇಂಧನ ಸರಳುಗಳ ನಡುವೆ ಗ್ರಾಫೈಟ್ ಸರಳುಗಳನ್ನು ಒಳನುಗ್ಗಿಸಲಾಗುತ್ತದೆ. ಗ್ರಾಫೈಟ್ ಸರಳುಗಳು ಪರಮಾಣು ವಿದಳನವನ್ನು ನಿಯಂತ್ರಿಸಿ ಸುಸ್ಥಿರ ವಿದ್ಯುತ್ ಉತ್ಪಾದಿಸಲು ಅನುಕೂಲಕರ.

ಚೆರ್ನೊಬಿಲ್ ನಗರವು ಉಕ್ರೇನ್‌ನ ರಾಜಧಾನಿ ಕೀವ್‌ನಿಂದ 130 ಕಿ.ಮೀ. ಉತ್ತರದಲ್ಲಿದ್ದು, ದಕ್ಷಿಣದಲ್ಲಿ ಬೆಲಾರಸ್ ಗಡಿಯಿಂದ 20 ಕಿ.ಮೀ. ದೂರದಲ್ಲಿದೆ. ಚೆರ್ನೊಬಿಲ್‌ನಲ್ಲಿ ನವೆಂಬರ್ 26, 1977ರಂದು ಪರಮಾಣು ಸ್ಥಾವರದ ಮೊದಲನೇ ಘಟಕವನ್ನು ಆರಂಭಿಸಲಾಯಿತು. 1978ರಲ್ಲಿ ಮತ್ತೆರಡು, 1981ರಲ್ಲಿ ನಾಲ್ಕನೆಯ ಘಟಕ ಕಾರ್ಯಾರಂಭಗೊಂಡವು. 1986ರ ಏಪ್ರಿಲ್ 25ರ ಮಧ್ಯರಾತ್ರಿ ನಾಲ್ಕನೇ ಘಟಕದ ಸಿಬ್ಬಂದಿಯು, ತುರ್ತು ಸಂದರ್ಭಗಳಲ್ಲಿ ಸ್ಥಾವರವು ಹೇಗೆ ಕಾರ್ಯ ನಿರ್ವಹಿಸಬಹುದು ಎಂಬುದನ್ನು ಪರೀಕ್ಷಿಸುವ ತಪ್ಪು ನಿರ್ಧಾರ ಕೈಗೊಂಡು, ವಿದಳನ ಕ್ರಿಯೆಯನ್ನು ನಿಯಂತ್ರಿಸುವ ಸರಳುಗಳ ನುಗ್ಗಿಸುವಿಕೆಯನ್ನು ಇದ್ದಕ್ಕಿದ್ದಂತೆ ತಡೆಹಿಡಿಯಲಾಯಿತು. ಇದರಿಂದ ವಿದಳನ ಕ್ರಿಯೆ ಅನಿಯಂತ್ರಿತವಾಯಿತು. ಮಿತಿಮೀರಿದ ತಾಪದಿಂದಾಗಿ ಸರಳುಗಳು ಕರಗಿ, ಇಂಧನವು ನೀರಿನ ಸಂಪರ್ಕಕ್ಕೆ ಬಂದು ಸುಮಾರು ಎಂಟು ಟನ್‌ಗಳಷ್ಟು ವಿಕಿರಣ ಅವಶೇಷವನ್ನು ವಾತಾವರಣಕ್ಕೆ ಚಿಮ್ಮಿಸುವಂತಹ ಭೀಕರ ಸ್ಫೋಟ ಸಂಭವಿಸಿತು. ಎರಡನೇ ಸ್ಫೋಟದಲ್ಲಿ 1660 ಪೈಪ್‌ಲೈನ್‌ಗಳು ಒತ್ತಡದಿಂದಾಗಿ ಒಡೆದುಹೋದವು. ಆ ಸಂದರ್ಭದಲ್ಲಿ ರಷ್ಯನ್ ಒಕ್ಕೂಟವು ದುರಂತವನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಅದಾದ ಮೂರು ದಿನಗಳ ನಂತರ (ಏಪ್ರಿಲ್ 28) ಚೆರ್ನೊಬಿಲ್‌ನಿಂದ 1000 ಕಿ.ಮೀ. ದೂರದ ಸ್ವೀಡಿಷ್ ದೇಶದ ವಿದ್ಯುತ್ ಸ್ಥಾವರವೊಂದರಲ್ಲಿದ್ದ ವಿಕಿರಣ ಸಂವೇದಕವು ವಿಕಿರಣ ಮಟ್ಟದಲ್ಲಿ ಇದ್ದಕ್ಕಿದ್ದ ಹಾಗೆ ಏರಿಕೆಯ ಸೂಚನೆ ನೀಡಿತು. ಆಗಲೇ ದುರಂತದ ತೀವ್ರತೆ ಅರಿವಿಗೆ ಬಂದಿದ್ದು. ಆ ನಂತರವೇ ರಕ್ಷಣಾ ಕಾರ್ಯಾಚರಣೆಗಳು ಆರಂಭಗೊಂಡವು. ಮೊದಲ ದಿನ ಹೆಲಿಕಾಪ್ಟರ್‌ನಿಂದ 150 ಟನ್‌ಗಳಷ್ಟು ಮಣ್ಣನ್ನು, ಮರುದಿನ 300 ಟನ್, ನಂತರದ ದಿನಗಳಲ್ಲಿ 750, 1500, 1900 – ಹೀಗೆ ಒಟ್ಟು 5000 ಟನ್ ಮಣ್ಣನ್ನು ಸ್ಥಾವರಕ್ಕೆ ಸುರಿಯಲಾಯಿತು. ಆದರದು ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಸುರಿದಂತಾಗಿತ್ತು.

ಚೆರ್ನೊಬಿಲ್ ದುರಂತದಲ್ಲಿ ತತ್‌ಕ್ಷಣ 30 ನೌಕರರು ಭಯಾನಕವಾಗಿ ಸಾವನ್ನಪ್ಪಿದ್ದರು. ತೀವ್ರ ವಿಕಿರಣ ಕಾಯಿಲೆಯಿಂದಾಗಿ (Acute radiation syndrome) 27 ಜನ ಅಗ್ನಿಶಾಮಕ ಸಿಬ್ಬಂದಿಯು ಒಂದು ವಾರದ ಅಂತರದಲ್ಲಿ ಮರಣಹೊಂದಿದರು. ದುರಂತ ಸಂಭವಿಸಿದ ತಿಂಗಳೊಳಗಾಗಿ 6500 ಜನ ಥೈರಾಯಿಡ್ ಕ್ಯಾನ್ಸರ್ ಪೀಡಿತರಾಗಿ ಸತ್ತರು. ಘಟನಾ ಸ್ಥಳಕ್ಕೆ ಮೊಟ್ಟ ಮೊದಲಿಗೆ ಪ್ರವೇಶಿಸಿದ ರಕ್ಷಣಾ ಪಡೆಗೆ ಅಪಾಯದ ಅರಿವೇ ಇರಲಿಲ್ಲ. ಅವರು ಉಟ್ಟ ಬಟ್ಟೆಯಲ್ಲಿಯೇ ಸ್ಥಾವರ ಪ್ರವೇಶಿಸಿದ್ದರು – ನೇರವಾಗಿ ಸಾವಿನ ಮನೆಗೆ ಹೋದಂತೆ. ಹಾಗೆ ಹೋದವರೆಲ್ಲ ತೀವ್ರ ವಿಕಿರಣ ಕಾಯಿಲೆಗೆ ತುತ್ತಾದರು. ಅಂದರೆ, ಒಂದೇ ಬಾರಿಗೆ 18000 ಎಕ್ಸ್ ಕಿರಣಗಳನ್ನು ಸಂಪೂರ್ಣ ದೇಹದ ಮೇಲೆ ಹಾಯಿಸಿದಾಗ ಉಂಟಾಗಬಹುದಾದ ತೀವ್ರ ಕಾಯಿಲೆ. ರಕ್ಷಣಾಪಡೆಯ ವ್ಲಾಡಿಮಿರ್ ಎನ್ನುವ ಯುವಕನ ಸಾವಂತೂ ಹೃದಯವಿದ್ರಾವಕವಾಗಿತ್ತು. ಆಸ್ಪತ್ರೆಗೆ ದಾಖಲಾದ ಅವನ ಕಾಲುಗಳು ಮತ್ತು ಕೈಗಳು ಬಿರುಕು ಬಿಟ್ಟು ರಕ್ತಸ್ರಾವ ಕಾಣಿಸಿಕೊಂಡಿತು. ಮೈಮೇಲೆ ಬೊಬ್ಬೆಗಳೆದ್ದವು. ಕುಪ್ಪೆ ಕುಪ್ಪೆ ಕೂದಲು ಉದುರಿದವು. ಅವನ ಬಾಯಿ, ನಾಲಿಗೆ, ಮುಖದ ಮೇಲೆ ಸುಟ್ಟ ಗಾಯಗಳಾದವು. ಕಂದು ಕಣ್ಣುಗಳು ನೀಲಿ ಬಣ್ಣಕ್ಕೆ ತಿರುಗಿದವು. ಮುಖ, ದೇಹಗಳು ಮೊದಲಿಗೆ ನೀಲಿಗಟ್ಟಿದವು. ನಂತರ ಕೆಂಪಾಗಿ ಕಂದು ಬಣ್ಣಕ್ಕೆ ತಿರುಗಿದವು. ಹೀಗೆ ಒಂದು ವಾರದ ನರಳಿಕೆಯ ನಂತರ ವ್ಲಾಡಿಮಿರ್ ಸಾವನ್ನಪ್ಪಿದನು. ಸ್ಥಾವರದ ಉಸ್ತುವಾರಿಯಾಗಿದ್ದ ವಿಕ್ಟರ್ ಬ್ರುಖಾನೋವ್‌ನನ್ನು ಬಂಧಿಸಲಾಯಿತು. ಜೈಲಿನಲ್ಲಿ ಅವನು ತನ್ನ 85ನೇ ವಯಸ್ಸಿಗೆ ಮರಣ ಹೊಂದಿದನು.

ವಿಕಿರಣಶೀಲ ಆಯೊಡಿನ್ ಧಾತುವು (ಸ್ಥಾವರದಲ್ಲಿ ಉಪಯೋಗಿಸಲಾದ ಇಂಧನ) ಮಾರಣಾಂತಿಕವಾಗಿ ಪರಿಣಮಿಸಿ, ಜನರ ಥೈರಾಯಿಡ್ ಗ್ರಂಥಿಗಳಲ್ಲಿ ಹೋಗಿ ಕುಳಿತು ಇಲ್ಲದ ಭಾನಗಡಿ ಎಬ್ಬಿಸಿತು; ಕ್ಯಾನ್ಸರ್‌ಗೆ ಕಾರಣವಾಗಿ ಮರಣಶಾಸನ ಬರೆಯಿತು. ಉಕ್ರೇನ್ ದೂರದರ್ಶನದಲ್ಲಿ ದುರ್ಘಟನೆ ಕುರಿತ ಕಿರುಸರಣಿ ಪ್ರಸಾರವಾಯಿತು. ಆ ಕಾರ್ಯಕ್ರಮದಲ್ಲಿ ಹೇಳಿದಂತೆ, ದುರಂತ ಸಂಭವಿಸಿದ ತಕ್ಷಣದಲ್ಲಿ ಸುತ್ತಲಿನ ಜನರಿಗೆ ಪೊಟ್ಯಾಶಿಯಂ ಆಯೋಡೈಡ್ ಮಾತ್ರೆಗಳನ್ನು ನುಂಗಿಸಿದ್ದರೆ ಅವುಗಳಲ್ಲಿನ ಐಯೋಡಿನ್ ಅಂಶವು ಥೈರಾಯಿಡ್ ಗ್ರಂಥಿಯಲ್ಲಿ


ಚೆರ್ನೋಬಿಲ್ ನ್ಯೂಕ್ಲಿಯರ್ ಪವರ್ ಪ್ಲ್ಯಾಂಟ್‌ನ ಒಂದು ನೋಟ